**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 231/2022

**ಸಾಕ್ಷಿಯನ್ನು ದಿನಾಂಕ 16.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಣ್ಣಸೋಮಚಾರಿ | ಪಿ.ಡಬ್ಲ್ಯೂ-15 |
| ತಂದೆಯ/ಗಂಡನ ಹೆಸರು | : | ದೇವಚಾರಿ | ಸಿ.ಡಬ್ಲ್ಯೂ-12 |
| ವಯಸ್ಸು | : | 60 | |
| ಉದ್ಯೋಗ | : | ಕಾರ್ಪೆಂಟರ್ | |
| ವಾಸ ಸ್ಥಳ | : | ಹಣಸಾಲೆ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಚಾಸ 11 ನನ್ನ ಹೆಂಡತಿ. ಚಾಸ 1, 13, 14 ರವರು ನನ್ನ ಹೆಂಡತಿಯ ತಂಗಿಯರು. ಚಾಸ 8 ಪ್ರದೀಪನು ಚಾಸ 1 ರವರ ಮಗನಿರುತ್ತಾನೆ. ಚಾಸ 10 ನಿಂಗಚಾರಿ ಚಾಸ 1 ರವರ ಗಂಡ ಇರುತ್ತಾರೆ. ಮೃತ ನಂಜಮ್ಮ ನನ್ನ ಹೆಂಡತಿಯ ತಾಯಿ ಇರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರು ನಂಜಮ್ಮನ ಸೊಸೆ ಮತ್ತು ಮೊಮ್ಮಕ್ಕಳು ಇರುತ್ತಾರೆ. ನಂಜಮ್ಮನ ಮಗ ಸಿದ್ದಾಚಾರಿ 8 ವರ್ಷದ ಹಿಂದೆ ಮರಣ ಹೊಂದಿರುತ್ತಾರೆ. ಮೃತ ನಂಜಮ್ಮಳು ಮೈಸೂರಿನ ಹೆಬ್ಬಾಳದ

ಮನೆಯಲ್ಲಿ ವಾಸವಿದ್ದರು. ನಂಜಮ್ಮಳು ಹೆಬ್ಬಾಳದ ಮನೆಯ 2 ನೇ ಮಹಡಿಯಲ್ಲಿ ವಾಸವಿದ್ದರು. ನ್ಯಾಯಾಲಯದ ಮುಂದಿರುವ ಆರೋಪಿತರು ಅದೇ ಮನೆಯ 1 ನೇ ಮಹಡಿಯಲ್ಲಿ ವಾಸವಿದ್ದರು ಮತ್ತು ಆ ಕಟ್ಟಡದ ನೆಲ ಮಹಡಿಯನ್ನು ಬಾಡಿಗೆಗೆ ನೀಡಿದ್ದರು. ನಂಜಮ್ಮ ವಾಸವಿದ್ದ ಮನೆಯನ್ನು ಅವರ ಮಗ ಸಿದ್ದಾಚಾರಿ ಕಟ್ಟಿಸಿದ್ದರು. ನಂಜಮ್ಮನಿಗೆ ಅವರ ಸೊಸೆ ಮತ್ತು ಮೊಮ್ಮಕ್ಕಳ ಜೊತೆ ಹೊಂದಾಣಿಕೆಯಾಗದ ಕಾರಣ ಅವರು ಪ್ರತ್ಯೇಕವಾಗಿ ವಾಸವಿದ್ದರು ಮತ್ತು ಅವರ ಊಟವನ್ನು ಅವರೇ ಮಾಡಿಕೊಳ್ಳುತ್ತಿದ್ದರು. ನಂಜಮ್ಮಳು ಊಟಕ್ಕೆ ಏನಾದರೂ ದಾರಿ ಮಾಡಿಕೊಡಿ ಎಂದು ನನ್ನ ಹೆಂಡತಿ ಬಳಿ ಕೇಳುತ್ತಿದ್ದರು. ನಂಜಮ್ಮ ಇವರಿಗೆ ಈ ಮೊದಲು ಒಂದು ಬಾರಿ ಕೈ ನುಣುಚಿದ್ದರು, ಆ ಕಾಲಕ್ಕೆ ಅವರು ನನ್ನ ಹೆಂಡತಿ ಬಳಿ ಹೇಳಿಕೊಂಡಿದ್ದರು. ಆರೋಪಿತರು ನನ್ನ ಹೆಂಡತಿ ಮತ್ತು ನಾದಿನಿಯರ ಜೊತೆ ಚನ್ನಾಗಿರಲಿಲ್ಲ. ನಂಜಮ್ಮ ಯಾವಾಗಲೊಮ್ಮೆ ನಮ್ಮ ಮನೆಗೆ ಬರುತ್ತಿದ್ದರು. ಅವರು ಕಷ್ಟ ಸುಖವನ್ನು ಅವರ ಹೆಣ್ಣು ಮಕ್ಕಳ ಬಳಿ ಹೇಳುತ್ತಿದ್ದರು, ಆದರೆ ನನ್ನ ಬಳಿ ಹೇಳುತ್ತಿರಲಿಲ್ಲ.

4 ವರ್ಷದ ಹಿಂದೆ ಒಂದು ದಿನ ಮದ್ಯಾಹ್ನ 2 ಗಂಟೆಗೆ ನನ್ನ ನಾದಿನಿಯ ಮಗ ಶಿವಕುಮಾರ್ ನನ್ನ ಹೆಂಡತಿಗೆ ಪೋನ್ ಮಾಡಿ ಅಜ್ಜಿ ಕೂಗಿದೂರು ಎದ್ದೇಳುತ್ತಿಲ್ಲ ಎಂದು ಹೇಳಿದ್ದರು. ಶಿವಕುಮಾರನಿಗೆ ಆ ಬಗ್ಗೆ ಬಸವಣ್ಣ ಹೇಳಿದ್ದರು. ಆ ವಿಷಯ ತಿಳಿದ ಬಳಿಕ ನಾನು ಮತ್ತು ನನ್ನ ಹೆಂಡತಿ ಮದ್ಯಾಹ್ನ 4 ಗಂಟೆಗೆ ಹೆಬ್ಬಾಳದ ನಂಜಮ್ಮ

ವಾಸವಿದ್ದ ಮನೆಗೆ ಬಂದೆವು. ನಾವು ನೋಡಿದಾಗ ಆ ಮನೆಯ ಕಿಟಕಿ ಗಾಜು ಒಡೆದಿತ್ತು ಮತ್ತು ಬಾಗಿಲು ಬೀಗ ಹಾಕಿತ್ತು. ಅಜ್ಜಿ ಮಲಗಿದ್ದನ್ನು ನಾವು ಕಿಟಕಿಯಿಂದ ನೋಡಿದೆವು. ನಂತರ ಅಲ್ಲಿದ್ದ ಯಾರೋ ಒಬ್ಬರು ಬಾಗಿಲನ್ನು ಒಡೆದು ನೋಡಿದಾಗ ನಂಜಮ್ಮ ಮರಣ ಹೊಂದಿದ್ದರು. ಅವರ ಕತ್ತಿನ ಬಳಿ ಹಾಗೂ ಕೈಗೆ ಏಟಾಗಿತ್ತು.

ನಂತರ ಪದ್ಮಮ್ಮನವರು ಆ ಬಗ್ಗೆ ದೂರು ನೀಡಿದರು. ದೂರು ನೀಡಿದ ಬಳಿಕ ನ್ಯಾಯಾಲಯದ ಮುಂದಿರುವ ಆರೋಪಿತರೇ ನಂಜಮ್ಮಳಿಗೆ ಹೊಡೆದಿರುತ್ತಾರೆ ಎಂದು ಗೊತ್ತಾಯಿತು. ಆ ಬಗ್ಗೆ ಆರೋಪಿತರೇ ಹೇಳಿಕೊಂಡಿದ್ದರಿಂದ ಗೊತ್ತಾಯಿತು. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ, ಪರಿಶೀಲಿಸಿ ಸಕಾರಣಗಳಿದ್ದರಿಂದ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

ಪೋಲಿಸರ ಮುಂದೆ ಆರೋಪಿತರು ಮತ್ತು ನಂಜಮ್ಮ ಬೇರೆ ಬೇರೆ ವಾಸವಿದ್ದರು ಮತ್ತು ಆರೋಪಿತರಿಗೂ ಮತ್ತು ನಂಜಮ್ಮಳಿಗೂ ಆಗುತ್ತಿರಲಿಲ್ಲ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ನಿಜ. ಆರೋಪಿತರೇ ನಂಜಮ್ಮಳ ಮನೆಗೆ ಹೋಗಿ

ಅವರಿಗೆ ಹೊಡೆದು, ಮುಖಕ್ಕೆ ಪ್ಲಾಸ್ಟಿಕ್ ಕವರ್ ಹಾಕಿ ಉಸಿರುಗಟ್ಟಿಸಿ ಸಾಯಿಸಿದ್ದೇವೆ ಎಂದು ಆರೋಪಿತರೇ ಹೇಳಿದ್ದರಿಂದ ನನಗೆ ಗೊತ್ತಾಯಿತು ಎಂದರೆ ನಿಜ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್.ಎನ್.ಆರ್ ವಕೀಲರಿಂದಃ**

ನಾನು ಶಾಲೆ ಕಲಿತಿಲ್ಲ. ನಾನು ಮರಗೆಲಸ ಮಾಡುತ್ತೇನೆ. ನಾನು ಹಣಸಾಲೆ ಗ್ರಾಮದಲ್ಲಿ ವಾಸವಿದ್ದೇನೆ. ಆರೋಪಿತರು ನನಗೆ ಸಂಬಂಧಿಕರು ಎಂದರೆ ನಿಜ. ನನ್ನ ಮದುವೆಯಾದಾಗ ಸಿದ್ದಾಚಾರಿಯ ಮದುವೆಯಾಗಿರಲಿಲ್ಲ. ಆ ಕಾಲಕ್ಕೆ ಸಿದ್ದಚಾರಿ ಮತ್ತು ನಂಜಮ್ಮ ಚನ್ನಾಗಿದ್ದರು ಎಂದರೆ ನಿಜ. ಸಿದ್ದಚಾರಿಯ ಮದುವೆಯಾದ ಬಳಿಕ ಸಿದ್ದಚಾರಿ, ಆತನ ಹೆಂಡತಿ ಮತ್ತು ಮಕ್ಕಳು ನಂಜಮ್ಮಳೊಂದಿಗೆ ಚನ್ನಾಗಿದ್ದರು ಮತ್ತು ಒಟ್ಟಿಗೆ ಇದ್ದರು ಎಂದರೆ ನಿಜ. ನನ್ನ ಮಗಳ ಮದುವೆಗೆ ಸಿದ್ದಚಾರಿ 50 ಸಾವಿರ ಹಣ ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಹೆಂಡತಿ ಮತ್ತು ನಾದಿನಿಯರ ಮಾತನ್ನು ನಾನು ಕೇಳುತ್ತೇನೆ ಎಂದರೆ ನಿಜ. ನಂಜಮ್ಮಳು ಸಿದ್ದಾಚಾರಿಯ ಮನೆಯಲ್ಲಿ ಊಟ ಮಾಡುತ್ತಿದ್ದರು ಎಂದರೆ ನಿಜ. ಸಿದ್ದಚಾರಿಯ ಮರಣದ ಬಳಿಕ 4 ನೇ ಆರೋಪಿಯು ನಂಜಮ್ಮಳ ಮುಂದಿನ ಭವಿಷ್ಯಕ್ಕಾಗಿ ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕಿನಲ್ಲಿ 49 ಸಾವಿರ ಹಣವನ್ನು ಠೇವಣಿ ಇಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ಗೊತ್ತಿಲ್ಲ ಎಂದು ನನ್ನ ಹೆಂಡತಿ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಠೇವಣಿ ಹಣಕ್ಕೆ 3 ನೇ ಆರೋಪಿಯಾದ ಸಿದ್ದರಾಜುನನ್ನು ನಾಮಿನಿ

ಮಾಡಿದ್ದರು ಎಂದರೆ ಗೊತ್ತಿಲ್ಲ. ನಂಜಮ್ಮಳಿಗೆ ಅಂದಾಜು 75 ವರ್ಷವಾಗಿತ್ತು ಎಂದರೆ ನಿಜ. ಆರೋಪಿತರೇ ನಂಜಮ್ಮಳ ಔಷೋದಪಚಾರ ಮಾಡುತ್ತಿದ್ದರು ಮತ್ತು ಊಟ ನೀಡುತ್ತಿದ್ದರು ಎಂದರೆ ಸರಿಯಲ್ಲ. ನಂಜಮ್ಮ ನಮ್ಮ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಂಜಮ್ಮಳು ದರಸಗುಪ್ಪೆಯ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣವನ್ನು ತನ್ನ ಎಲ್ಲ ಮಕ್ಕಳಿಗೆ ಸಮನಾಗಿ ಹಂಚಿದ್ದರು ಎಂದರೆ ಸರಿಯಲ್ಲ. ಸಿದ್ದಚಾರಿಯ ಪಾಲಿನ ಹಣ ಹಾಗೂ ಸ್ವಂತ ಹಣದಿಂದ ಹೆಬ್ಬಾಳದ ಮನೆ ಕಟ್ಟಿದ್ದರು ಎಂದರೆ ಸರಿಯಲ್ಲ. ಸಿದ್ದಚಾರಿ ಜೀವಂತವಿದ್ದಾಗ ತನ್ನ ತಾಯಿ ಚನ್ನಾಗಿರಲಿ ಎಂದು ಮೇಲ್ಗಡೆ ರೂಂ ಕಟ್ಟಿಸಿಕೊಟ್ಟಿದ್ದ ಎಂದರೆ ನಿಜ. ನಂಜಮ್ಮ ಆ ರೂಂನಲ್ಲಿ ವಾಸವಿದ್ದಾಗ ಆರೋಪಿತರೇ ಅವರ ಊಟ ಮತ್ತು ಉಪಚಾರವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಹೆಂಡತಿ ಮತ್ತು ನಾದಿನಿಯರು ಯಾರು ನಂಜಮ್ಮಳನ್ನು ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನಂಜಮ್ಮಳಿಗೆ ಬಿ.ಪಿ, ಮಧುಮೇಹ ಹಾಗೂ ಹೃದಯ ಖಾಯಿಲೆ ಇತ್ತು ಎಂದರೆ ಸರಿಯಲ್ಲ. ಅವರಿಗೆ ಆರೋಪಿತರೇ ಮಂಡ್ಯದ ಖಾಸಗಿ ಕ್ಲಿನಿಕಿನಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಸರಿಯಲ್ಲ.

ನಾನು ಘಟನೆ ದಿನ ಮದ್ಯಾಹ್ನ 3.30 ಗಂಟೆಗೆ ನಂಜಮ್ಮಳ ಮನೆಗೆ ಬಂದೆ. ನಮಗೆ ಶಿವು ಪೋನ್ ಮಾಡಿ ಅಜ್ಜಿ ಏಳುತ್ತಿಲ್ಲ ಎಂದು ಹೇಳಿದ್ದರಿಂದ ನಾವು ಅಲ್ಲಿಗೆ ಹೋದೆವು. ಆ ಪೋನ್ ಬಂದಾಗ ನಾನು ಊರಲ್ಲೇ ಇದ್ದೆ. ನಾನು ಬಂದಾಗ

ನಂಜಮ್ಮ ರೂಂ ಬಾಗಿಲಿನ ಬೀಗ ಹಾಕಿತ್ತು. ಆ ಕಾಲಕ್ಕೆ ಬಾಗಿಲನ್ನು ಯಾರು ತೆಗೆದರು ಎಂದು ನಾನು ನೋಡಿಲ್ಲ. ಆ ಮನೆಯ ಪೂರ್ವಕ್ಕೆ ಬಾಗಿಲು ಇದೆ. ಇನ್ನುಳಿದ ಮೂರು ದಿಕ್ಕಿಗೆ ಯಾರ ಮನೆಗಳಿವೆ ಎಂದು ಗೊತ್ತಿಲ್ಲ. ಆ ದಿನ ನಾನು ಅಲ್ಲಿಗೆ ಹೋದಾಗ ಆರೋಪಿತರು ಅಲ್ಲಿದ್ದರು ಹಾಗೂ ಬೇರೆಯವರು ಸಹ ಬಂದರು. ಆ ದಿನ ಆರೋಪಿತರು ಅಲ್ಲಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಸಹ ಮನೆಯಲ್ಲಿ ಪಾಲು ಕೇಳಬೇಕೆಂಬ ಉದ್ದೇಶದಿಂದ ಆರೋಪಿತರ ವಿರುದ್ದ ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಈ ಮೊದಲು ಎಲ್ಲಿಯೂ ಹೇಳಿಕೆ ನೀಡಿಲ್ಲ ಎಂದರೆ ನಿಜ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು